## 'ಬಂದ ತಕ್ಷಣ ಹೇಳು'



ಗುಂಡ ತನ್ನ ಸಂಸಾರ ಸಮೇತ ಟಿಪ್ಪುಸುಲ್ತಾನ್ ಅರಮನೆಯನ್ನು ನೋಡಲು ಹೋಗಿದ್ದ. ಅರಮನೆಯನ್ನು ಒಂದು ಸುತ್ತು ಸುತ್ತಾಡಿಕೊಂಡು ಬರುವಷ್ಟರಲ್ಲಿ ಅವನಿಗೆ ಆಯಾಸವಾಗಿತ್ತು. ಆಯಾಸ ಪರಿಹರಿಸಿಕೊಳ್ಳಲು ಅವನು ತನ್ನ ಎದುರಿಗೆ ಕಾಣಿಸಿದ ಪುರಾತನ ಕಾಲದ ಸುಂದರ ಕುರ್ಚಿಯ ಮೇಲೆ ಕುಳಿತುಕೊಂಡ. ಇದನ್ನು ನೋಡಿದ ಸೆಕ್ಯೂರಿಟಿ ಗಾರ್ಡ್, 'ರೀ ಯಾರ್ರೀ ಅದು? ಅದರ ಮೇಲೆ ಹಾಗೆಲ್ಲಾ ಕುಳಿತುಕೊಳ್ಳಬಾರದು! ಏಳ್ರೀ ಮೇಲೆ' ಎಂದ. ಗುಂಡ, 'ಯಾಕಪ್ಪಾ ಕುಳಿತುಕೊಳ್ಳಬಾರದು? ಏನಾಯಿತೀಗ?' ಎಂದು ಕೇಳಿದ. ಗಾರ್ಡ್, 'ರೀ ಸ್ವಾಮಿ, ಅದು ಟಿಪ್ಪುಸುಲ್ತಾನ್ ಕುಳಿತುಕೊಳ್ಳುತ್ತಿದ್ದ ಕುರ್ಚಿ ಗೊತ್ತಾ?' ಎಂದ. ಅದಕ್ಕೆ ಗುಂಡ 'ಅಷ್ಟೇ ತಾನೇ? ಅವರು ಬಂದ ತಕ್ಷಣ ಹೇಳು, ಎದ್ದುಬಿಡ್ತೀನಿ' ಎಂದ.

**ಎಂ.ಕೆ. ಮಂಜುನಾಥ್**

## ಹೇರ್‌ಕಟ್



'ಏ ಕಿಟ್ಟಿ, ಮೊದ್ಲು ಹೋಗಿ ಹೇರ್ ಕಟಿಂಗ್ ಮಾಡಿಸಿಕೊಂಡು ಬಾ. ಎಷ್ಟುದ್ದ ಕೂದಲು ಬೆಳೆಸಿದ್ದೀ ಅಸಹ್ಯ... ಅದರ ಬದಲು ಸ್ವಲ್ಪ ಸ್ವಲ್ಪನಾದ್ರೂ ಬುದ್ಧಿ ಬೆಳೆಸಿಕೋ...' ಎಂದು ಒಂದು ದಿನ ಬೆಳಗ್ಗೆ ಅಪ್ಪ ಕಿಟ್ಟಿಗೆ ಹೇಳಿದ. ಅದಕ್ಕೆ ಕಿಟ್ಟಿ, 'ಇದೇ ಲೇಟೆಸ್ಟ್ ಫ್ಯಾಶನ್ ಅಪ್ಪಾ...' ಎಂದ. 'ಏನ್ ಫ್ಯಾಶನ್ನೋ ಏನೋ. ನಿನ್ನ ತಂಗಿ ನೋಡೋಕೆ ಬಂದಿದ್ದ ಗಂಡು ನಿನ್ನ ಒಪ್ಕೊಂಡು ಹೋದ...' ಎಂದು ಅಪ್ಪ ಬೇಸರದಿಂದ ಮಗನ ಕಡೆಗೆ ನೋಡಿದ.

**ಯು.ಎಸ್. ಶ್ರೀನಿವಾಸರಾವ್**